# ಮಕ್ಕಳಲ್ಲಿ ಬರವಣಿಗೆ ಅಭ್ಯಾಸ ಹೆಚ್ಚಿಸಿ...



ಇಂದಿನ ಡಿಜಿಟಲ್ ಯುಗದಲ್ಲಿ ಮಕ್ಕಳಲ್ಲಿ ಬರವಣಿಗೆಯ ಸಾಮರ್ಥ್ಯ ಕುಂಠಿತಗೊಳ್ಳುತ್ತಿದೆ. ಸ್ಮಾರ್ಟ್‌ಕ್ಲಾಸ್, ಸ್ಮಾರ್ಟ್‌ಫೋನ್, ಗೂಗಲ್ ಸರ್ಚ್ ಮುಂತಾದವುಗಳ ಅತಿಯಾದ ಬಳಕೆಯಿಂದ ಕೈಬರಹ, ಶಬ್ದಗಳ ಅರ್ಥ, ಶಬ್ದಕೋಶಗಳ ಬಳಕೆ ಮಾಡದಿರುವುದರಿಂದ ಮಕ್ಕಳಲ್ಲಿ ಕನ್ನಡ ವ್ಯಾಕರಣದ ಬಗ್ಗೆಯೂ ಜ್ಞಾನವಿಸ್ತಾರವಾಗುತ್ತಿಲ್ಲ. ಮಕ್ಕಳಲ್ಲಿ ಹೆಚ್ಚೆಚ್ಚು ಓದುವ, ಬರೆಯುವ ಹವ್ಯಾಸ ರೂಢಿಸಿಕೊಳ್ಳುವಂತೆ ಮಾಡುವುದು ಶಿಕ್ಷಕರ, ಪೋಷಕರ ಕರ್ತವ್ಯ.

**■ ಸುಮಾವೀಣಾ, ಹಾಸನ**

ಮಗುವಿಗೆ ಅಕ್ಷರಭ್ಯಾಸ ಮಾಡಿಸುವುದೆಂದರೆ, ಆ ದಿನ ನಿಗದಿ ಮಾಡುವುದೆಂದರೆ ಅಪ್ಪ ಅಮ್ಮಂದಿರಿಗೆ, ಅಜ್ಜಿ ತಾತಂದಿರಿಗೆ ಎಲ್ಲಿಲ್ಲದ ಸಂಭ್ರಮ. ಆ ವಿಶೇಷ ಅಸ್ಥೆ ಈಗಿಲ್ಲ! ಅಂದಿನ ಸಂಭ್ರಮ ಈಗ ಕೇವಲ ಸಾಂಕೇತಿಕ ಆಚರಣೆಯಾಗಿದೆ. ಆಧುನಿಕ ತಂತ್ರಜ್ಞಾನದ ಜಾಲಕ್ಕೆ ಸಿಕ್ಕಿರುವ ನಾವು ನಮ್ಮ ಮಕ್ಕಳಿಗೆ ಸರಿಯಾಗಿ ಅಕ್ಷರಾಭ್ಯಾಸ ಮಾಡಿಸುತ್ತಿಲ್ಲ. ಕೆಲ ಮಕ್ಕಳಿಗೆ ಸ್ಲೇಟು ಬಳಪಗಳ ಪರಿಚಯವೇ ಇಲ್ಲ.

ಸ್ಮಾರ್ಟ್‌ಫೋನ್‌ಗಳಲ್ಲಿನ ಆ್ಯಪ್‌ಗಳ ಮೂಲಕ ಅಕ್ಷರ ತಿದ್ದಿಸುತ್ತಿದ್ದೇವೆ. ಹಿಂದಿನ ಅಧ್ಯಾಪಕರು ಕಾಗುಣಿತ ಹೇಳಿಕೊಡುವಾಗ ಕೊಟ್ಟು, ಇಳಿ, ಗುಣಿಸು, ದೀರ್ಘ ಮುಂತಾದವನ್ನು ಮಕ್ಕಳಿಗೆ ಮನದಟ್ಟು ಮಾಡುತ್ತಿದ್ದರು. ಈಗ ಕೇವಲ ಕ, ಕಾ, ಕಿ, ಕೀ ಎಂದು ಹೇಳಿಕೊಡುತ್ತಿದ್ದೇವೆ. ಇದು ತಪ್ಪು ಕ್ರಮ. ಹಾಗಾಗಿ ಮಕ್ಕಳ ಬರವಣಿಗೆಯ ಸಾಮರ್ಥ್ಯಕ್ಕೆ ನಾವೇ ಮೊದಲ ವಿಘ್ನ ಎಂದರೆ ತಪ್ಪಾಗುವುದಿಲ್ಲ. ಮಕ್ಕಳಿಗೆ 'ಕಾಗುಣಿತ' ಎಂದು ಉಚ್ಛರಿಸಲೂ ಇಂದು ಬರುತ್ತಿಲ್ಲ 'ಕಾಕುಣಿತ' ಎಂದು ಹೇಳುತ್ತಿವೆ. ಕಾಪಿ ಬರೆಸುವಾಗ ಹಿಂದೆ ಮೊದಲ ಸಾಲನ್ನು ಅಧ್ಯಾಪಕರು ಬರೆದರೆ ಆ ಹಾಳೆಯ ಕಡೆಯ ಸಾಲಿನಿಂದ ಕಾಪಿ ಬರೆಯಬೇಕಾಗಿತ್ತು. ಹಾಗಾಗಿ ತಪ್ಪುಗಳಾಗುತ್ತಿರಲಿಲ್ಲ.

ಈಗೆಲ್ಲಾ ಕಾಪಿ ಪುಸ್ತಕದ ಮೇಲೆ ಮೊದಲೇ ಅಚ್ಚಾಗಿರುತ್ತದೆ. ಮೇಲಿನ ಸಾಲನ್ನು ನೋಡಿ ಕೆಳಸಾಲನ್ನು ಬರೆಯುವಾಗ ಕಣ್ತಪ್ಪು, ಕೈತಪ್ಪು ಆದಲ್ಲಿ ಆ ಹಾಳೆಯ ತುಂಬೆಲ್ಲಾ ತಪ್ಪುಗಳು ಪುನರಾವರ್ತಿಸುತ್ತವೆ. ಉದಾಹರಣೆಗೆ ಶಕುಂತಲೆ ಬರೆಯುವಾಗ ಅನುಸ್ವಾರವನ್ನು ಒಂದು ಸಾಲಿನಲ್ಲಿ 'ಶ' ಅಕ್ಷರದ ನಂತರ ಬರೆದರೆ 'ಶಂಕುತಲೆ' ಆಗುತ್ತದೆ. ಮುಂದಿನ ಸಾಲನ್ನೂ ಹಾಗೆ ಬರೆದರೆ ತಪ್ಪನ್ನು ಮತ್ತೆ ಮತ್ತೆ ಬರೆದಂತಾಗುತ್ತದೆ ಅಲ್ಲವೇ! ಅಲ್ಲಿಗೆ ಇದು ಎರಡನೇ ವಿಘ್ನ.

ಬರವಣಿಗೆ ಸಾಮರ್ಥ್ಯದಲ್ಲಿ ಹಿಂದಿನ ಶಿಕ್ಷಕರು ಮೊದಲು ಸಿಲಬಸ್ ಎಂದು ಕಲಿಸುತ್ತಿರಲಿಲ್ಲ. ಮಕ್ಕಳು ಚೆನ್ನಾಗಿ ಅಕ್ಷರಗಳನ್ನು ಸ್ವತಂತ್ರವಾಗಿ ಬರೆಯುವವರೆಗೂ ತಿದ್ದಿಸುತ್ತಿದ್ದರು. ಆದರೆ ಈಗ ಸಿಲಬಸ್ ಮಂತ್ಲಿ ಲಿಸ್ಟ್ ಕೊಡಬೇಕು. ನೋಟ್ ಪುಸ್ತಕಗಳಲ್ಲಿ ಬರೆಸಿ ಖಾಲಿ ಮಾಡಿಸಿ ಪೋಷಕರಿಗೆ ಪ್ರೋಗ್ರೆಸ್ ತೋರಿಸಬೇಕಷ್ಟೆ. ಪೂರ್ವ ಅಭ್ಯಾಸವಿಲ್ಲದೆ ನೇರವಾಗಿ ಅಕ್ಷರಗಳನ್ನೇ ಬರೆಸುವ ಕ್ರಮ. ಇವೆಲ್ಲ ಭಾಷಾಶಿಕ್ಷಕರಿಗೆ ಪ್ರೌಢಶಿಕ್ಷಣದ ಹಂತದಲ್ಲಿ ಮಕ್ಕಳಿಗೆ ಭೋದಿಸಲು ಕಷ್ಟವಾಗುತ್ತಿದೆ. ಕಾಗುಣಿತ ಎಂದರೆ ಸ್ಪೆಲ್ಲಿಂಗಾ... ಎಂದು ನಮ್ಮ ಮಕ್ಕಳು ಕೇಳುತ್ತಿವೆ. 'ಹಣ್ಣು' ಬರೆಯುವುದಕ್ಕೆ 'ಅಣ್ಣು, ಶಾಲೆಗೆ ಸಾಲೆ, ಹಸಿವಿಗೆ ಎಸಿವು,

